# كتاب التوحيد

# ಕಿತಾಬುತ್ತೌಹೀದ್

(ಅಶ್ಶೈಖ್ ಸಾಲಿಹ್ ಅಲ್ ಉಸೈಮೀನ್, ಅಶ್ಶೈಖ್ ಸಾಲಿಹ್ ಅಲ್ ಫೌಝಾನ್ ಮುಂತಾದ ಹಿರಿಯ ವಿದ್ವಾಂಸರ ವಿವರಣೆಗಳನ್ನು ಆಧಾರವಾಗಿಟ್ಟುಕೊಂಡು ನಡೆಸಲಾದ ದರ್ಸ್)

ಭಾಗ ೦೩

ಅಬೂ ಹಮ್ಮಾದ್ ಸಲಾಹುದ್ದೀನ್

بِسْمِ ٱللَّهِ ٱلرَّحْمَٰنِ ٱلرَّحِيمِ

(ತನ್ನ ಸೃಷ್ಟಿಗಳಿಗೆ) ಅಪಾರ ದಯಾಮಯನೂ, (ತನ್ನ ನೈಜ ವಿಶ್ವಾಸಿಗಳಾದ ದಾಸರಿಗೆ) ಸದಾ ಕರುಣಾಮಯಿಯೂ ಆದ ಅಲ್ಲಾಹುವಿನ ನಾಮದಿಂದ.

ಸರ್ವಸ್ತುತಿಗಳೂ ಸಕಲಲೋಕಗಳ ರಬ್ಬ್ ಆದ (ಪರಿಪಾಲಕನಾದ) ಅಲ್ಲಾಹುವಿಗೆ ಮೀಸಲು. ಅಂತಿಮ ವಿಜಯವು ಅಲ್ಲಾಹುವಿನ ಭಯಭಕ್ತಿ ಹಾಗೂ ಅವನ ಆಜ್ಞೆ-ನಿಷೇಧಗಳನ್ನು ಪಾಲಿಸುವವರಿಗಾಗಿದೆ. ಅಕ್ರಮಿಗಳ ಹೊರತು (ಇತರರ ವಿರುದ್ಧ) ವೈಷಮ್ಯವಿಲ್ಲ. ಸಜ್ಜನ ದಾಸರ ರಕ್ಷಕನಾದ ಅಲ್ಲಾಹುವಿನ ಹೊರತು ಅನ್ಯ ಆರಾಧ್ಯರಿಲ್ಲ ಎಂದು ನಾನು ಸಾಕ್ಷ್ಯವಹಿಸುತ್ತೇನೆ, ಮತ್ತು ಪ್ರಾಮಾಣಿಕ ಪ್ರವಾದಿಯಾದ ಮುಹಮ್ಮದ್ (صَلَّى ٱللَّٰهُ عَلَيْهِ وَسَلَّمَ) ರವರು ಅವನ (ಅಲ್ಲಾಹುವಿನ) ದಾಸರೂ ಸಂದೇಶವಾಹಕರೂ ಆಗಿರುವರೆಂದು ನಾನು ಸಾಕ್ಷ್ಯವಹಿಸುತ್ತೇನೆ. ಮುಹಮ್ಮದ್ (صَلَّى ٱللَّٰهُ عَلَيْهِ وَسَلَّمَ) ರವರ ಮೇಲೂ, ಅವರ ಕುಟುಂಬದವರ ಮೇಲೂ, ಅವರ ಸಹಚರರ (ಸಹಾಬಾಗಳ) ಮೇಲೂ ಹಾಗೂ ಪ್ರತಿಫಲದ ದಿನದ ತನಕ ಅವರನ್ನು ಅತ್ಯುತ್ತಮ ರೀತಿಯಲ್ಲಿ ಅನುಸರಿಸಿದವರ ಮೇಲೂ ಅಲ್ಲಾಹುವಿನ ಸಲಾತ್ ಮತ್ತು ಸಲಾಮ್‌ಗಳು ಇರಲಿ.

ಮುಂದುವರಿದು ಹೇಳುವುದೇನೆಂದರೆ :

ಅಲ್ಲಾಹುವಿನ ದಾಸರೇ, ಮುಂದೆ ನಾವು ಕಲಿಯಲು ಹೋಗುತ್ತಿರುವುದು **‘ಕಿತಾಬ್ ಅತ್ತೌಹೀದ್’** ಆಗಿದೆ. ಇದು ಆ ಸರಣಿಯ ಮೂರನೆಯ ತರಗತಿಯಾಗಿದೆ.

## ಉಲಮಾಗಳ ಶ್ರೇಷ್ಠತೆ ಹಾಗೂ ಈ ದೀನನ್ನು ಸಂರಕ್ಷಿಸುವಲ್ಲಿ ಅವರ ಪಾತ್ರ...

ಶೈಖ್ ಸಾಲಿಹ್ ಅಲ್–ಫೌಝಾನ್ (حفظه الله) ಈ ಗ್ರಂಥದ ವಿವರಣೆಯ (ಇಆನತುಲ್ ಮುಸ್ತಫೀದ್ ಬಿ ಶರ್ಹ್ ಕಿತಾಬಿತ್ತೌಹೀದ್) ಪ್ರಸ್ತಾವನೆಯಲ್ಲಿ ಹೇಳುತ್ತಾರೆ :

ಇಮಾಮ್ ಅಹ್ಮದ್ ಬಿನ್ ಹಂಬಲ್ (رحمه الله) ರವರು ತಮ್ಮ ಗ್ರಂಥವಾದ **'ಅರ್ರದ್ದ್ ಅಲಲ್ ಜಹ್ಮಿಯ್ಯಃ'** ಇದರ ಮುನ್ನುಡಿಯಲ್ಲಿ ಹೇಳಿರುವರು : "ಪ್ರವಾದಿಗಳ ನಂತರ ಎಲ್ಲಾ ಕಾಲದಲ್ಲೂ ಇಲ್ಮ್ (ಜ್ಞಾನ) ಇರುವವರನ್ನು (ಅರ್ಥಾತ್ ಉಲಮಾಗಳನ್ನು) ಬಾಕಿಯುಳಿಸಿ ನೆಲೆನಿಲ್ಲುವಂತೆ ಮಾಡಿದ ಅಲ್ಲಾಹುವಿಗಾಗಿದೆ ಸರ್ವಸ್ತುತಿ. ಅಲ್ಲಾಹುವಿನ ಗ್ರಂಥದಲ್ಲಿ ಅತಿರೇಕವಾದಿಗಳು ನಡೆಸುವ ತಿರುಚುವಿಕೆಯನ್ನೂ, ಪಥಭ್ರಷ್ಟರು ಮುಂದಿಡುವ ಪೊಳ್ಳುವಾದಗಳನ್ನೂ ಹಾಗೂ ಅಜ್ಞಾನಿಗಳು ಮಾಡುವ ಅಪಾರ್ಥಗಳನ್ನು ಅವರು (ಉಲಮಾಗಳು) ಅಲ್ಲಗೆಳೆಯುವರು.

ಪಥಭ್ರಷ್ಟರಾದ ಜನರನ್ನು ಸನ್ಮಾರ್ಗದೆಡೆಗೆ ಅವರು ಆಹ್ವಾನಿಸುವರು ಹಾಗೂ (ಸತ್ಯದೆಡೆಗೆ ಆಹ್ವಾನಿಸುವ ವೇಳೆ) ಜನರಿಂದುಂಟಾಗುವ ತೊಂದರೆಗಳಿಂದ ಅವರು ತಾಳ್ಮೆವಹಿಸುವರು. ಪಥಭ್ರಷ್ಟರ ಪೈಕಿ ಅದೆಷ್ಟೋ ಜನರಿಗೆ ಅವರು ಸನ್ಮಾರ್ಗವನ್ನು ತೋರಿಸಿ ಕೊಟ್ಟಿರುವರು ಹಾಗೂ ಇಬ್‌ಲೀಸ್‌ಗೆ ಬಲಿಪಶುವಾದ ಅದೆಷ್ಟೋ ಜನರಿಗೆ (ಸನ್ಮಾರ್ಗವೆಂಬ) ಜೀವವನ್ನು ಅವರು ತುಂಬಿರುವರು. ಜನರ ಮೇಲೆ ಅವರ ಪ್ರಭಾವವು ಅದೆಂತಹ ಉತ್ತಮವಾದುದಾಗಿದೆ ಆದರೆ ಅದಕ್ಕೆ ಪ್ರತಿಯಾಗಿ ಅವರ ವಿರುದ್ಧ ಜನರ (ವಿರೋಧಿಗಳ) ಪ್ರಭಾವ ಮಾತ್ರ ಅದೆಂತಹ ಕೆಟ್ಟದಾಗಿದೆ."

**ಟಿಪ್ಪಣಿ :**

ಉಲಮಾಗಳು ಜನರನ್ನು ಸನ್ಮಾರ್ಗಕ್ಕೆ ಆಹ್ವಾನಿಸಿದಾಗ ಅದಕ್ಕೆ ಪ್ರತಿಯಾಗಿ ಅದೆಷ್ಟೋ ಜನರಿಂದ ಅವರು ಪಡೆದದ್ದು ಮಾತ್ರ ಹಾನಿ ಮತ್ತು ಹಿಂಸೆಗಳಾಗಿವೆ, ಅವರನ್ನು ಆಕ್ಷೇಪಿಸಿ, ಅವರಿಗೆ ಹೊಡೆದು, ಕಲ್ಲೆಸೆದು, ಅವರ ಮೇಲೆ ಅನ್ಯಾಯವೆಸಗಿ ಅವರ ವಿರೋಧಿಗಳು ಅವರ ವಿರುದ್ಧ ಅತ್ಯಂತ ಕೆಟ್ಟ ದುಷ್ಪರಿಣಾಮವನ್ನು ಬೀರಿರುವರು.

ಶೈಖುಲ್ ಇಸ್ಲಾಮ್ ಇಬ್ನ್ ತಯ್‌ಮಿಯ್ಯಃ (رحمه الله) ಹೇಳಿದರು :

“ಈ ದೀನ್ (ಧರ್ಮವು) ಎಂದಿಗೂ ರದ್ದಾಗದು (ಅರ್ಥಾತ್ ಬದಲಾಗದು). ಈ ದೀನ್‌ನಲ್ಲಿ (ಧರ್ಮದಲ್ಲಿ) ತಿರುಚುವಿಕೆ ನಡೆಸುವ, (ಅದನ್ನು) ಮಾರ್ಪಾಡು ಮಾಡುವ, ಸುಳ್ಳು ಹಾಗೂ ಸತ್ಯತೆಯನ್ನು ಮಿಥ್ಯದ ಮೂಲಕ ಮರೆಮಾಚುವ ಜನರಿರುವರು, ಆದ್ದರಿಂದ ಇದರಲ್ಲಿ (ದೀನ್‌ನಲ್ಲಿ) ರಸೂಲ್‌ಗಳ ಉತ್ತರಾಧಿಕಾರಿಗಳಾಗಿ ಪುರಾವೆಗಳನ್ನು ನೆಲೆಗೊಳಿಸುವ ಜನರನ್ನು (ವಿದ್ವಾಂಸರನ್ನು) ಅಲ್ಲಾಹು ಕಾರ್ಯವ್ಯವಸ್ಥೆಗೊಳಿಸುವನು. ಹಾಗೆ ಅವರು (ವಿದ್ವಾಂಸರು) ಅತಿರೇಕವಾದಿಗಳು ನಡೆಸುವ ತಿರುಚುವಿಕೆಯನ್ನೂ, ಪಥಭ್ರಷ್ಟರು ಮುಂದಿಡುವ ಪೊಳ್ಳು ವಾದಗಳನ್ನೂ ಹಾಗೂ ಅಜ್ಞಾನಿಗಳು ಮಾಡುವ ಅಪಾರ್ಥಗಳನ್ನು (ಬಯಲಿಗೆಳೆದು) ಅಲ್ಲಗಳೆಯುವರು. ಹೀಗೆ ಅಲ್ಲಾಹು ಸತ್ಯತೆಯನ್ನು ಸ್ಥಾಪಿಸುವನು ಹಾಗೂ ಅಸತ್ಯವನ್ನು ನಿಷ್ಫಲಗೊಳಿಸುವನು.” [1]

1. ಮಜ್ಮೂಅ್ ಅಲ್–ಫತಾವ 11 : 435

**ಟಿಪ್ಪಣಿ :**

ಶಿರ್ಕ್ ಮತ್ತು ಸರ್ವ ಪಥಭ್ರಷ್ಟತೆಗಳು ಶಿಯಾಗಳ ಮೂಲಕ, ಸೂಫಿಗಳ ಮೂಲಕ ಹಾಗೂ ಇನ್ನಿತರ ಪಥಭ್ರಷ್ಟರ ಮೂಲಕ ಆರಂಭವಾದಾಗ, ಇಸ್ಲಾಮಿನಲ್ಲಿಲ್ಲದ ನವೀನಾಚಾರಗಳು ಹುಟ್ಟಿಕೊಂಡಾಗ ಅವುಗಳಲ್ಲಿ ಸತ್ಯತೆ ಯಾವುದು ಮಿಥ್ಯತೆ ಯಾವುದೆಂದು ಜನರಿಗೆ ತೋರಿಸಿಕೊಟ್ಟಿರುವುದು ಉಲಮಾಗಳಾಗಿದ್ದಾರೆ, ಪ್ರವಾದಿಗಳ ಬಳಿಕ ಅವರ ಮೂಲಕ ಅಲ್ಲಾಹು ಈ ದೀನ್‌ಅನ್ನು ನೆಲೆನಿಲ್ಲಿಸಿರುವನು. ಉಲಮಾಗಳ ಮರಣವು ಲೋಕಾಂತ್ಯದ ಲಕ್ಷಣವಾಗಿದೆ. ರಸೂಲ್ (ﷺ) ರವರು ಹೇಳಿದರು :

« إِنَّ مِنْ أَشْرَاطِ السَّاعَةِ أَنْ يُرْفَعَ الْعِلْمُ، وَيَكْثُرَ الْجَهْلُ »

**“ಇಲ್ಮ್ ಮೇಲೆತ್ತಲ್ಪಡುವುದು ಹಾಗೂ ಜಹ್ಲ್ (ಅಜ್ಞಾನ) ವ್ಯಾಪಕವಾಗುವುದು ಖಂಡಿತವಾಗಿಯೂ ಲೋಕಾಂತ್ಯದ ಲಕ್ಷಣಗಳ ಪೈಕಿ ಸೇರಿದ್ದಾಗಿದೆ.”** [2]

ಇಲ್ಮ್ ಮೇಲೆತ್ತಲ್ಪಡುವುದು ಹೇಗೆಂದರೆ, ಇಮಾಮ್ ಇಬ್ನ್ ಹಜರ್ ಅಲ್‌–ಅಸ್ಕಲಾನಿ (رَحِمَهُ ٱللَّٰهُ) ಹೇಳುತ್ತಾರೆ :

« لَا يُرْفَعُ إِلَّا بِقَبْضِ الْعُلَمَاءِ »

**“ಉಲಮಾಗಳ ಮರಣದ ವಿನಾ ಇಲ್ಮ್ ಮೇಲೆತ್ತಲ್ಪಡದು.”** [3]

---

2. ಸಹೀಹ್ ಅಲ್ ಬುಖಾರಿ : 5231

3. ಫತ್‌ಹುಲ್ ಬಾರೀ 1 : 178

ಹಾಗಾಗಿ ಇಲ್ಮ್ ನಷ್ಟವಾಗುವುದು ಉಲಮಾಗಳ ಮರಣದ ಮೂಲಕವಾಗಿದೆ. ಇಬ್ನ್ ಮಸ್ಊದ್ (رَضِيَ ٱللَّهُ عَنْهُ) ರವರು ಹೇಳುತ್ತಾರೆ :

« تَعَلَّمُوا الْعِلْمَ قَبْلَ أَنْ يُقْبَضَ، وَقَبْضُهُ أَنْ يَذْهَبَ أَهْلُهُ »

**"ಇಲ್ಮ್ ಮೇಲೆತ್ತಲ್ಪಡುವುದಕ್ಕಿಂತಲೂ ಮುಂಚಿತವಾಗಿ ಇಲ್ಮ್ ಕಲಿಯಿರಿ. ಇಲ್ಮ್ ಮೇಲೆತ್ತಲ್ಪಡುವುದು ಹೇಗೆಂದರೆ ಅದರ ಜನರ (ಅರ್ಥಾತ್ ಉಲಮಾಗಳ) ನಿರ್ಗಮನದ (ಮರಣದ) ಮೂಲಕವಾಗಿದೆ."** [4]

ಅಬೂ ಸಈದ್ ಅಲ್ ಕುದ್‌ರಿಯ್ಯ್ (رَضِيَ ٱللَّهُ عَنْهُ) ಹೇಳುತ್ತಾರೆ : (ಪ್ರವಾದಿ صَلَّىٰ ٱللَّهُ عَلَيْهِ وَسَلَّمَ ರವರೊಂದಿಗೆ) ನಾನು ಕೇಳಿದೆನು,

« يَا رَسُولَ اللهِ، مَنْ أَشَدُّ النَّاسِ بَلَاءً؟ قَالَ: " الْأَنْبِيَاءُ " قَالَ: ثُمَّ مَنْ؟ قَالَ: " ثُمَّ الْعُلَمَاءُ " قَالَ: ثُمَّ مَنْ؟ قَالَ: " ثُمَّ الصَّالِحُونَ »

**"ಓ ಅಲ್ಲಾಹುವಿನ ರಸೂಲರೇ, ಜನರ ಪೈಕಿ ಅತ್ಯಂತ ಹೆಚ್ಚು ಕಠಿಣವಾಗಿ ಪರೀಕ್ಷಿಸಲ್ಪಡುವವರು ಯಾರು? ಪ್ರವಾದಿ (صَلَّىٰ ٱللَّهُ عَلَيْهِ وَسَلَّمَ) ರವರು ಹೇಳಿದರು : ಅಂಬಿಯಾಗಳಾಗಿರುವರು (ಅರ್ಥಾತ್ ಪ್ರವಾದಿಗಳಾಗಿರುವರು). (ನಾನು ಕೇಳಿದೆ) ನಂತರ ಯಾರು? ಅವರು (صَلَّىٰ ٱللَّهُ عَلَيْهِ وَسَلَّمَ) ಉತ್ತರಿಸಿದರು : ನಂತರ**

4. ಸುನನ್ ಅದ್ದಾರಿಮೀ : 144

**ಉಲಮಾಗಳಾಗಿರುವರು. (ನಾನು ಕೇಳಿದೆ) ನಂತರ ಯಾರು? ಅವರು (صَلَّى ٱللَّهُ عَلَيْهِ وَسَلَّمَ) ಉತ್ತರಿಸಿದರು : ನಂತರ ಸಾಲಿಹೀನ್‌ಗಳಾಗಿರುವರು (ಅರ್ಥಾತ್ ದೀನನ್ನು ಪಾಲಿಸುವ, ಇಬಾದತ್ ನೆಲೆಗೊಳಿಸುವ ಸಜ್ಜನ ದಾಸರಾಗಿರುವರು).”** [5]

ಹಾಗಾಗಿ ಪ್ರವಾದಿಗಳ ನಂತರ ಹೆಚ್ಚು ಪರೀಕ್ಷಿಸಲ್ಪಡುವವರು –ಪ್ರವಾದಿಗಳ ವಾರೀಸುದಾರರಾಗಿರುವ– ಉಲಮಾಗಳಾಗಿರುವರು. ಹೆಚ್ಚೇಕೆ, ಅಹ್ಲುಸ್ಸುನ್ನಃದ ಇಮಾಮ್ (إمام أهل السنة) ಎಂದೇ ಪ್ರಖ್ಯಾತರಾಗಿರುವ ಇಮಾಮ್ ಅಹ್ಮದ್ ಬಿನ್ ಹಂಬಲ್ (رَحِمَهُ ٱللَّهُ) ರವರ ಜೀವನ ಚರಿತ್ರೆಯನ್ನು ನಾವು ಕಲಿಯುವುದಾದರೆ ಅವರೆದುರಿಸಿದ ಕಷ್ಟಗಳೆದುರು ನಮ್ಮದೇನೂ ಇರಲಾರದು. ನಾವು ಐಶ್ವರ್ಯದಲ್ಲಿ ಜೀವಿಸುತ್ತಿದ್ದೇವೆಂದು ನಮಗೆ ಭಾಸವಾಗಬಹುದು. ರಸೂಲ್ (صَلَّى ٱللَّهُ عَلَيْهِ وَسَلَّمَ) ರವರ ಕಾಲಘಟ್ಟದ ನಂತರ ಬಂದ ಇಮಾಮ್ ಶಾಫಿಈ ಹಾಗೂ ಇನ್ನಿತರ ಶ್ರೇಷ್ಠ ವಿದ್ವಾಂಸರೊಂದಿಗೆ ಇಲ್ಮ್ ಕಲಿತ ಹಾಗೂ ಇಮಾಮ್ ಬುಖಾರಿ, ಇಮಾಮ್ ಮುಸ್ಲಿಮ್ (رَحِمَهُمَا ٱللَّهُ) ಮುಂತಾದವರ ಗುರುವರ್ಯರಾದ ಇಮಾಮ್ ಅಹ್ಮದ್ ಬಿನ್ ಹಂಬಲ್ (رَحِمَهُ ٱللَّهُ) ರವರು ಕೇವಲ ಸತ್ಯವನ್ನು ಹೇಳಿದ ಕಾರಣಕ್ಕಾಗಿ ಅಂದಿನ ಖಲೀಫಃರು ಅವರನ್ನು ತೀವ್ರವಾಗಿ ಪೀಡಿಸಿದ್ದರು. ಇಮಾಮ್ ಶಂಸುದ್ದೀನ್ ಅಝ್ಝಹಬೀ (رَحِمَهُ ٱللَّهُ) ರವರು ಇದನ್ನು ತಮ್ಮ ‘ಸಿಯರ್ ಅಅ್‌ಲಾಮ್ ಅನ್ನುಬಲಾಅ್’ ಎಂಬ ಗ್ರಂಥದಲ್ಲಿ ಉಲ್ಲೇಖಿಸಿರುವರು.

ಇಮಾಮ್ ಅಹ್ಮದ್ ಬಿನ್ ಹಂಬಲ್ (رَحِمَهُ ٱللَّهُ) ರವರನ್ನು ಹೊಡೆದು ಕತ್ತೆಯ ಮೇಲೆ ಮಲಗಿಸಿ ಸಂಕೋಲೆಯಲ್ಲಿ ಕಟ್ಟಿಹಾಕಿದ್ದರು. ಅಂದು ಇಲ್ಮ್ ಕಲಿತ ಇತರ ಜನರಿದ್ದರು ಆದರೆ ಖಲೀಫಃರ ಆಜ್ಞೆಗೆ ಭಯಪಟ್ಟುಕೊಂಡು ಅವರು ಖಲೀಫಃ ಹೇಳಿದಂತೆ

5. (ಬೈಹಕೀಯವರ – ಅಸ್ಸುನನ್ ಅಲ್–ಕುಬ್‌ರಾ : 6533 )

ನಡೆದುಕೊಂಡರು. ಆದರೆ ಇಮಾಮ್ ಅಹ್ಮದ್ ಬಿನ್ ಹಂಬಲ್ (رَحِمَهُ ٱللَّهُ) ರವರು ತಾವು ಒಬ್ಬರಾಗಿದ್ದರೂ ಸಹ ಸತ್ಯದಲ್ಲಿ ದೃಢವಾಗಿ ನೆಲೆನಿಂತಿದ್ದರು. ಹಾಗಾಗಿ ಸಹೋದರರೇ, ನಮಗೂ ಸಹ ಸತ್ಯದ ಮೇಲೆ ದೃಢವಾಗಿ ನೆಲೆನಿಲ್ಲುವಂತಹ ದೃಢಚಿತ್ತತೆ ಉಂಟಾಗಬೇಕಾಗಿದೆ. ನಮಗಿಂತ ಮುಂಚೆ ಕಳೆದುಹೋದ ಸಲಫ್‌ಗಳ (ಸಜ್ಜನ ಪೂರ್ವಿಕರ) ಜೀವನಚರಿತ್ರೆಯನ್ನು ನಾವು ಅರ್ಥೈಸಿಕೊಳ್ಳಬೇಕಾಗಿದೆ.

ಇಮಾಮ್ ಅಹ್ಮದ್ ಬಿನ್ ಹಂಬಲ್ (رَحِمَهُ ٱللَّهُ) ಹೇಳುತ್ತಾರೆ : "ನನ್ನನ್ನು ಹೊಡೆದು ಕತ್ತೆಯ ಮೇಲೆ ಮಲಗಿಸಿ ಸಂಕೋಲೆಯಲ್ಲಿ ಕಟ್ಟಿಹಾಕಿದ್ದರು. ಕೆಲವೊಮ್ಮೆ ಆ ಸಂಕೋಲೆಯ ಭಾರದಿಂದಾಗಿ ಕತ್ತೆಯು ನಡೆಯುವಾಗ ನನ್ನ ಮುಖವು ನೆಲಕ್ಕೆ ತಾಗಿಕೊಂಡು ಹೋಗುವ ಸ್ಥಿತಿಯಲ್ಲಿತ್ತು! ಆ ಖಲೀಫರ ಆಜ್ಞೆಯ ಮೇರೆಗೆ ಅವರ ಸೇವಕರು ನನಗೆ ಅತ್ಯಂತ ಕ್ರೂರವಾಗಿ ಹೊಡೆಯುತ್ತಿದ್ದರು, (ಈ ಕಾರಣದಿಂದಾಗಿ) ಕೆಲವೊಮ್ಮೆ ನನ್ನ ಪ್ರಜ್ಞೆ ತಪ್ಪುತ್ತಿತ್ತು."

ಇಂತಹ ಪರಿಸ್ಥಿತಿಯಲ್ಲಿ ಅವರಿಗೆ ಚಿಕಿತ್ಸೆ ನೀಡಲೆಂದು ಬಂದ ವೈದ್ಯರೋರ್ವರು ಹೇಳುತ್ತಾರೆ :

« قَدْ رَأَيْتُ مَنْ ضُربَ أَلَفَ سوطٍ، مَا رأيتُ ضرباً مِثْلَ هَذَا »

**"ನಾನು ಸಾವಿರ ಚಾಟಿ ಏಟುಗಳನ್ನು ತಿಂದ ವ್ಯಕ್ತಿಗಳನ್ನು ಕಂಡಿರುವೆನು ಆದರೆ ಇಂತಹ ಏಟುಗಳನ್ನು ನಾನೆಂದೂ ಕಂಡಿಲ್ಲ!"** [6]

ಇದರ ಕುರಿತಂತೆ ಇಮಾಮ್ ಅಝ್ಝಹಬೀ (رَحِمَهُ ٱللَّهُ) ಹೇಳುತ್ತಾರೆ :

---

6. ಸಿಯರ್ ಅಅ್‌ಲಾಮ್ ಅನ್ನುಬಲಾಅ್ 11 : 256

« وَكَانَ أَثرُ الضَّربِ بَيِّناً فِي ظَهْرِهِ إِلَى أَنْ تُوُفِّيَ »

**“ಇಮಾಮ್ ಅಹ್ಮದ್ ಬಿನ್ ಹಂಬಲ್ (رَحِمَهُ ٱللَّهُ) ರವರು ಮರಣಹೊಂದುವ ತನಕ ಆ ಏಟಿನ ಗುರುತುಗಳು ಅವರ ಬೆನ್ನಿನಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದ್ದವು.!”** [7]

ಆ ಖಲೀಫರನ್ನು ದಾರಿ ತಪ್ಪಿಸುತ್ತಿದ್ದ ಹಾಗೂ ಇಮಾಮ್ ಅಹ್ಮದ್ ಬಿನ್ ಹಂಬಲ್ (رَحِمَهُ ٱللَّهُ) ರವರಿಗೆ ವಿರುದ್ಧವಾಗಿದ್ದ, ಅಹ್ಮದ್ ಬಿನ್ ಅಬೀ ದಾವೂದ್ ಎಂಬ ವ್ಯಕ್ತಿಯಿದ್ದನು. ಅಂದಿನ ಕಾಲದಲ್ಲಿ ಅವನು (ಅಹ್ಮದ್ ಬಿನ್ ಅಬೀ ದಾವೂದ್) ಅತ್ಯಂತ ಪ್ರಖ್ಯಾತ ವ್ಯಕ್ತಿಯಾಗಿದ್ದನು. ಅವನೊಡನೆ ನಮಾಝ್ ನಿರ್ವಹಿಸಲು ಜನರು ಗುಂಪು ಗುಂಪಾಗಿ ಬರುತ್ತಿದ್ದರು, ಅವನೊಂದಿಗೆ ಕಾಲಕಳೆಯಲು ಜನರು ಉತ್ಸಾಹ ತೋರುತ್ತಿದ್ದರು. ಆದರೆ ಅಹ್ಮದ್ ಬಿನ್ ಅಬೀ ದಾವೂದ್ ಇದ್ದದ್ದು ಬಾತಿಲ್‌ನಲ್ಲಾಗಿತ್ತು (ಮಿಥ್ಯತೆಯಲಾಗಿತ್ತು). ಇಮಾಮ್ ಅಹ್ಮದ್ ಬಿನ್ ಹಂಬಲ್ (رَحِمَهُ ٱللَّهُ) ರವರು ಸತ್ಯದ ಮೇಲೆ ಒಬ್ಬೊಂಟಿಗರಾಗಿದ್ದರು. ಆದರೆ ಅಲ್ಲಾಹುವಿನ ಅನುಗ್ರಹದಿಂದ ಸತ್ಯವು ನೆಲೆನಿಂತಿತು.

ಇಂದು ಯಾರಿಗಾದರೂ ಅಹ್ಮದ್ ಬಿನ್ ಅಬೀ ದಾವೂದ್ ಎಂಬಾತನ ನೆನಪಿದೆಯೇ? ನಮಗಾರಿಗೂ ಅವನ ಕುರಿತು ಅರಿವಿಲ್ಲ!. ಆದರೆ ಸಾವಿರಾರು ವರ್ಷಗಳ ಮುಂಚೆ ಮರಣಹೊಂದಿದ ಇಮಾಮ್ ಅಹ್ಮದ್ ಬಿನ್ ಹಂಬಲ್ (رَحِمَهُ ٱللَّهُ) ರವರ ನೆನಪು ನಮಗೆಲ್ಲರಿಗಿದೆ! ಅವರಿಂದಿಗೂ ನಮ್ಮ ಮನಸ್ಸಿನಲ್ಲಿರುವರು. ಇದು ಸತ್ಯತೆಯ ಮೇಲೆ ಅವರು ನಿಲೆನಿಂತಿರುವುದಕ್ಕಿರುವ ಪ್ರತಿಫಲವಾಗಿದೆ. ಇದು ನಮಗೊಂದು ಪಾಠವಾಗಿದೆ. ಉಲಮಾಗಳು ಅಂತಹ ತ್ಯಾಗತೆತ್ತ ಜನರಾಗಿರುವರು.

7. (ಸಿಯರ್ ಅಅ್‌ಲಾಮ್ ಅನ್ನುಬಲಾಅ್ 11 : 257)

ಆದರೆ ಇಂದಿನ ಜನರು ಅವರ ತ್ಯಾಗಗಳನ್ನು ಸಲೀಸಾಗಿ ಕಾಣುತ್ತಾರೆ. ಇಂದು ನಾವು ಸತ್ಯತೆಯ ಮೇಲೆ ನೆಲೆನಿಲ್ಲಲಿರುವ ಪ್ರಮುಖ ಕಾರಣ ಅಲ್ಲಾಹು ಅವರ ಮೂಲಕ ಈ ದೀನನ್ನು ಸಂರಕ್ಷಿಸಿರುವನು ಎಂಬುದಾಗಿದೆ.

ಶೈಖ್ ಸಾಲಿಹ್ ಅಲ್-ಫೌಝಾನ್ (حَفِظَهُ اللهُ) ಹೇಳುತ್ತಾರೆ :

(ಈ ಮೊದಲು ಉಲ್ಲೇಖಿಸಿದಂತೆ) ಇಮಾಮ್ ಅಹ್ಮದ್ (رَحِمَهُ اللهُ) ರವರ ಅದೇ ಹಾದಿಯನ್ನು ತುಳಿದ ಶ್ರೇಷ್ಠ ವ್ಯಕ್ತಿಯಾಗಿದ್ದರು – ಈಗ ನಾವು ಕಲಿಯಲು ಹೋಗುತ್ತಿರುವ, ಕಿತಾಬುತ್ತೌಹೀದ್ ಗ್ರಂಥದ ಲೇಖಕರಾದ– ಅಶ್ಶೈಖ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رَحِمَهُ اللهُ) ರವರು. ಅವರು ಜನರನ್ನು ಸತ್ಯತೆಯೆಡೆಗೆ ಆಹ್ವಾನಿಸಿದ ಹಾಗೂ ಜನರಿಂದುಂಟಾದ ಹಾನಿಗಳನ್ನು ಸಹಿಸಿದ ವ್ಯಕ್ತಿಯಾಗಿದ್ದರು.

ಕಳೆದುಹೋದ ಉಲಮಾಗಳಂತೆ ಸಮುದಾಯದಲ್ಲಿ ಮಿಥ್ಯತೆಯು ಪ್ರವೇಶಿಸಿದಾಗ ಅದನ್ನು ಅವರು ಹೇಗೆ ಎದುರಿಸಿದ್ದರೋ ಅದೇರೀತಿ ಇವರೂ ಸಹ ಮಿಥ್ಯತೆಗಳನ್ನು ಎದುರಿಸಿದವರಾಗಿದ್ದಾರೆ. ಅವರ ಕಾಲದಲ್ಲಿ ಅಕೀದಃದಲ್ಲಿ ಪಥಭ್ರಷ್ಟರಾದವರು, ಆಡಳಿತ ಕಾರ್ಯಗಳಲ್ಲಿ ಆಡಳಿತಗಾರರ ನಡುವೆ ಇದ್ದ ಪರಸ್ಪರ ಭಿನ್ನತೆಗಳು, ಅದೇರೀತಿ ಜಾಹಿಲಿಯ್ಯತ್ತಿನ ಸ್ವಭಾವನ್ನು ಹೊಂದಿದ್ದ ಕಬರ್‌ಗಳನ್ನು (ಸಮಾಧಿಗಳನ್ನು) ಎತ್ತರಿಸಿ ಕಟ್ಟಿಕೊಂಡು ಅದನ್ನು ಆರಾಧಿಸುವವರು, ಮಾಟ-ಮಂತ್ರ ಮಾಡುವವರು ಮುಂತಾದವರಿದ್ದರು. ಒಳಿತನ್ನು ಆದೇಶಿಸುವ ಹಾಗೂ ಕೆಡುಕನ್ನು ತಡೆಯುವ ವಿಷಯದಲ್ಲಿ ಅವರು ನಿಷ್ಕ್ರಿಯರಾಗಿದ್ದ ಜನರಾಗಿದ್ದರು.

ಅವರ ಕಾಲದಲ್ಲಿ ಫಿಖ್‌ಹ್‌ನ (ಕರ್ಮಶಾಸ್ತ್ರದ) ಕುರಿತು ಅಗಾಧ ಜ್ಞಾನ ಹೊಂದಿದ ಉಲಮಾಗಳಿದ್ದರು. ಆದರೆ ಕೇವಲ ಉಲಮಾಗಳ ಅಸ್ತಿತ್ವವು ಸಾಲದು, ಬದಲಾಗಿ ಅತ್ಯಂತ ಪ್ರಾಮುಖ್ಯತೆಯಿರುವ ವಿಷಯವೇನೆಂದರೆ ಮುಸ್ಲಿಮ್ ಉಮ್ಮತ್ತನ್ನು

ಸುಧಾರಿಸುವಲ್ಲಿ ಅವರ ಪಾತ್ರವೇನು ಎಂಬುದಾಗಿದೆ. ಬನೂ ಇಸ್ರಾಈಲ್ ಸಂತತಿಯ ನಡುವೆಯೂ ಉಲಮಾಗಳಿದ್ದರು ಆದರೆ (ಸತ್ಯವನ್ನು ಜನರಿಗೆ ವಿವರಿಸಿಕೊಡದ ಕಾರಣದಿಂದಾಗಿ) ಅವರು ನಾಶಹೊಂದಿದರು. ಯಾವಾಗ ಅವರು ಜನರಿಗೆ ಒಳಿತನ್ನು ಉಪದೇಶಿಸುವುದನ್ನು ಉಪೇಕ್ಷಿಸಿದರೋ ಆಗ ಶೈತಾನ್ ಅವರನ್ನು ಸ್ವಾಧೀನಪಡಿಸಿಕೊಂಡನು.

ಅಲ್ಲಾಹು (سُبْحَانَهُ وَتَعَالَى) ಹೇಳಿದನು :

﴿وَتَرَىٰ كَثِيرًا مِّنْهُمْ يُسَٰرِعُونَ فِى ٱلْإِثْمِ وَٱلْعُدْوَٰنِ وَأَكْلِهِمُ ٱلسُّحْتَ ۚ لَبِئْسَ مَا كَانُوا۟ يَعْمَلُونَ ﴿٦٢﴾ لَوْلَا يَنْهَىٰهُمُ ٱلرَّبَّٰنِيُّونَ وَٱلْأَحْبَارُ عَن قَوْلِهِمُ ٱلْإِثْمَ وَأَكْلِهِمُ ٱلسُّحْتَ ۚ لَبِئْسَ مَا كَانُوا۟ يَصْنَعُونَ ﴿٦٣﴾﴾

**"ಅವರ (ಅರ್ಥಾತ್ ಯಹೂದಿಗಳ) ಪೈಕಿ ಹೆಚ್ಚಿನವರೂ ಪಾಪಕೃತ್ಯದೆಡೆಗೆ, ಅತಿಕ್ರಮದೆಡೆಗೆ ಹಾಗೂ ನಿಷಿದ್ಧವಾಗಿರುವುದನ್ನು (ಅರ್ಥಾತ್ ಲಂಚ, ಬಡ್ಡಿ ಇತ್ಯಾದಿಗಳನ್ನು) ತಿನ್ನುವುದರೆಡೆಗೆ ಆತುರದಿಂದ ಧಾವಿಸುತ್ತಿರುವುದಾಗಿ ತಾವು ಕಾಣುವಿರಿ. ಅವರು ಎಸಗುತ್ತಿರುವುದು ಖಂಡಿತವಾಗಿಯೂ ಹೇಯವಾದುದಾಗಿದೆ. ಪಾಪಕರ ಮಾತುಗಳನ್ನು ನುಡಿಯುವುದರಿಂದಲೂ ಹಾಗೂ ನಿಷಿದ್ಧವಾದುದನ್ನು ತಿನ್ನುವುದರಿಂದಲೂ ರಬ್ಬಾನಿಯ್ಯೂನ್‌ಗಳು (ಅಧಿಕಾರ ಸ್ಥಾನದಲ್ಲಿರುವ ಧಾರ್ಮಿಕ ಪಂಡಿತ ನೇತಾರರು) ಮತ್ತು ವಿದ್ವಾಂಸರು ಅವರನ್ನು ತಡೆಯುವುದಿಲ್ಲವೇಕೆ? ಅವರು ಮಾಡುತ್ತಿದ್ದ ಕೃತ್ಯಗಳು ಅದೆಷ್ಟು ನಿಕೃಷ್ಟವಾದುದಾಗಿದೆ."** [8]

ಅಲ್ಲಾಹು (سُبْحَانَهُ وَتَعَالَى) ಹೇಳಿದನು :

8. ಕುರ್‌ಆನ್ 5 : 62–63

﴿وَإِذۡ أَخَذَ ٱللَّهُ مِيثَٰقَ ٱلَّذِينَ أُوتُواْ ٱلۡكِتَٰبَ لَتُبَيِّنُنَّهُۥ لِلنَّاسِ وَلَا تَكۡتُمُونَهُۥ فَنَبَذُوهُ وَرَآءَ ظُهُورِهِمۡ وَٱشۡتَرَوۡاْ بِهِۦ ثَمَنٗا قَلِيلٗاۖ فَبِئۡسَ مَا يَشۡتَرُونَ ١٨٧﴾

**"ಅದನ್ನು (ಅರ್ಥಾತ್ ಪ್ರವಾದಿ ಮುಹಮ್ಮದ್ ﷺ ರವರ ಆಗಮನದ ವಾಣಿಯನ್ನು ಹಾಗೂ ಧಾರ್ಮಿಕ ಜ್ಞಾನವನ್ನು) ಜನರಿಗೆ ತಿಳಿಸಿ ಸ್ಪಷ್ಟಪಡಿಸುವಂತೆಯೂ ಹಾಗೂ ಅದನ್ನು ಮುಚ್ಚಿಡದಂತೆಯೂ ಗ್ರಂಥ ನೀಡಲಾದವರೊಂದಿಗೆ (ಅರ್ಥಾತ್ ಯಹೂದಿ ಮತ್ತು ನಸಾರಾರೊಂದಿಗೆ) ಅಲ್ಲಾಹು ಕರಾರು ಪಡೆದ ಸಂದರ್ಭವನ್ನು ಸ್ಮರಿಸಿರಿ. ಆದರೆ ಅವರದನ್ನು ತಮ್ಮ ಬೆನ್ನಹಿಂದಕ್ಕೆ ಎಸೆದುಬಿಟ್ಟರು ಮತ್ತು ಅದರಿಂದ ಅಲ್ಪಲಾಭವನ್ನು ಖರೀದಿಸಿಕೊಂಡರು. ಅವರು ಕೊಂಡುಕೊಂಡಿರುವುದು ಅದೆಷ್ಟು ನೀಚವಾದುದಾಗಿದೆ."** [9]

ಈ ಸೂಕ್ತಿಯ ತಫ್ಸೀರ್‌ನಲ್ಲಿ (ವ್ಯಾಖ್ಯಾನದಲ್ಲಿ) ಇಮಾಮ್ ಇಬ್ನ್ ಕಸೀರ್ (رَحِمَهُ ٱللَّهُ) ಹೇಳುತ್ತಾರೆ :

« وَفِي هَذَا تَحْذِير لِلْعُلَمَاءِ أَنْ يَسْلُكُوا مَسْلَكَهُمْ فَيُصِيبَهُمْ مَا أَصَابَهُمْ »

**"ಅವರ (ಅರ್ಥಾತ್ ಯಹೂದಿ ಮತ್ತು ನಸಾರಗಳ) ನಡವಳಿಕೆಯನ್ನು ಅನುಕರಿಸದಿರಲು ಉಲಮಾಗಳಿಗಿರುವ ತಾಕೀತನ್ನು ಈ ಆಯತ್ ಒಳಗೊಂಡಿದೆ. ಪರಿಣಾಮವಾಗಿ ಅವರಿಗೆ (ಅರ್ಥಾತ್ ಯಹೂದಿ ಮತ್ತು ನಸಾರಗಳಿಗೆ) ಬಾಧಿಸಿದ ಗತಿಯೇ ಇವರಿಗೂ ಬಾಧಿಸುವುದು."**

9. ಕುರ್‌ಆನ್ 3 : 187

ಶೈಖ್ ಸಾಲಿಹ್ ಅಲ್-ಉಸೈಮೀನ್ (رَحِمَهُ ٱللَّهُ) ರವರು ಹೇಳುತ್ತಾರೆ :

« وَهَذَا وَاقِعٌ مِنْ الْيَهُودِ وَالنَّصَارَى وَمِنْ هَذِهِ الْأُمَّةِ أَيْضًا فَإِنَّ مِنْ أَهْلِ الْعِلْمِ مَنْ يَكْتُمُ الْعِلْمَ مِنْ أَجْلِ الدُّنْيَا فَيَشْتَرِي بِهِ ثَمَنًا قَلِيلا »

**"ಇದು ಯಹೂದಿ ಮತ್ತು ನಸಾರಾಗಳಿಂದ ಸಂಭವಿಸುತ್ತಿರುವುದಲ್ಲದೆ ಈ ಉಮ್ಮತ್‌ನಲ್ಲಿಯೂ ಇದು ಕಾಣಸಿಗುತ್ತದೆ, ಹೀಗೆ ಇಲ್ಮ್ ಕಲಿತವರ ಪೈಕಿ ಒಬ್ಬಾತನು ತನ್ನ ಐಹಿಕ ಲಾಭಕ್ಕಾಗಿ ಸತ್ಯತೆಯನ್ನು ಮುಚ್ಚಿಡುತ್ತಾನೆ, ಹಾಗೂ ಅದನ್ನು ತುಚ್ಛಬೆಲೆಗೆ (ಐಹಿಕ ಲಾಭಗಳಿಗೆ) ಮಾರಿಬಿಡುತ್ತಾನೆ!"** [10]

ಸಹೋದರರರೇ, ಸತ್ಯತೆಯನ್ನು ಅರಿತ ಅದೆಷ್ಟೋ ಜನರಿರುವರು, ಆದರೆ ಅವರು ಐಹಿಕ ಲಾಭಕ್ಕಾಗಿ, ಜನರಿಗಾಗಿ, ತಮ್ಮ ಗುಂಪು ಅಥವಾ ಸಂಘಟನೆಗಾಗಿ ಅರಿತಿದ್ದೂ ಸಹ ಸತ್ಯತೆಯನ್ನು ಮರೆಮಾಚುತ್ತಾರೆ! ಇನ್ನು ಕೆಲವರು ಮಸ್ಜಿದ್‌ನಲ್ಲಿ ತನ್ನ ಖತೀಬ್ ವೃತ್ತಿಯು ಇಲ್ಲದಾಗಬಹುದೆಂದೂ ತಾವು ನಿರುದ್ಯೋಗಿಗಳಾಗಿ ಬಿಡುವೆವೆಂದು ಭಾವಿಸಿಕೊಂಡು ಸತ್ಯತೆಯನ್ನು ಮರೆಮಾಚುತ್ತಾರೆ. ಹಾಗೂ ಅವರು ಶ್ರೀಮಂತರು ಹಾಗೂ ಧನಿಕರನ್ನು ಸಂತೃಪ್ತಿಗೊಳಿಸುವ ಸಲುವಾಗಿ (ಸಂದರ್ಭಕ್ಕೆ ಅನುಗುಣವಾಗಿ) ದೀನನ್ನು ಹೊಂದಿಸಿಕೊಂಡು ಹೋಗುತ್ತಾರೆ. ಇಂತಹ ಜನರ ಪರಲೋಕವು ನಷ್ಟವಾಗುವುದು. ಇದು ಯಹೂದಿಗಳ ಪ್ರವೃತ್ತಿಯಾಗಿದೆ.

ಮುಂದುವರಿದು, ಶೈಖ್ ಸಾಲಿಹ್ ಅಲ್-ಫೌಝಾನ್ (حَفِظَهُ ٱللَّهُ) ಹೇಳುತ್ತಾರೆ :

10. ತಫ್ಸೀರ್ ಸೂರಃ ಅಲ್ ಬಕರಃ : 159

ಹೀಗಿರುವುದರಿಂದ, ಅಲ್ಲಾಹುವಿನ ಕ್ರಮವು ಬದಲಾಗದು. ಆದ್ದರಿಂದ ಅಲ್ಲಾಹುವಿನ ಅನುಗ್ರಹ ಹಾಗೂ ತದನಂತರ ಈ ಉಮ್ಮತ್‌ನ ಪ್ರಾಮಾಣಿಕರಾದ ವಿದ್ವಾಂಸರು ಹಾಗೂ ಹಿತಕಾರಿಗಳಾದ (ಇಸ್ಲಾಮಿನ ಸರಿಯಾದ ವಿಶ್ವಾಸ ಹಾಗೂ ಕರ್ಮಗಳೆಡೆಗೆ ಆಹ್ವಾನಿಸುವ) ಸಂದೇಶ ಪ್ರಚಾರಕರ ಪ್ರಯತ್ನದ ಹೊರತು ಈ ಸಮುದಾಯವು ತನ್ನ ನ್ಯೂನತೆ ಹಾಗೂ ನಿದ್ರಾ ಸ್ಥಿತಿಯಿಂದ ಎಂದಿಗೂ ಎದ್ದೇಳದು.

ಇಮಾಮ್ ಮಾಲಿಕ್ ಅವರ ಮೇಲೆ ಅಲ್ಲಾಹುವಿನ ಕರುಣೆಯಿರಲಿ, ಅವರು ಹೇಳಿದರು :

« لَا يُصْلِحُ آخِرَ هَذِهِ الْأُمَّةِ إِلَّا مَا أَصْلَحَ أَوَّلَهَا »

**"ಈ ಉಮ್ಮತ್‌ನ ಮೊತ್ತಮೊದಲ ಜನರು (ತೌಹೀದ್ ಹಾಗೂ ಸುನ್ನತ್‌ನ ಮೂಲಕ) ಹೇಗೆ ಸುಧಾರಣೆಗೊಂಡರೋ ಅದರ (ಆ ರೀತಿಯ) ಹೊರತು ಈ ಉಮ್ಮತ್‌ನ ಕೊನೇಯ ಜನರೂ ಕೂಡ ಸುಧಾರಣೆಗೊಳ್ಳುವುದಿಲ್ಲ."**

**ಟಿಪ್ಪಣಿ :**

ನಮ್ಮ ಸಜ್ಜನ ಮುಂಗಾಮಿಗಳು (ಸಲಫ್‌ಗಳು) ಯಾವ ಮಾರ್ಗದ ಮೇಲೆ ಸಾಗಿರುವರೋ ಹಾಗೂ ಬದಲಾವಣೆಯಾಗಿರುವರೋ ನಮಗಿರುವುದು ಅದೇ ಮಾರ್ಗವಾಗಿದೆ. ಅವರು ಯಾವ ರೀತಿಯಲ್ಲಿ ಬದಲಾಗಿರುವರೋ ನಮಗೆ ಬಾಕಿಯುಳಿದಿರುವುದು ಅದೇ ರೀತಿಯಾಗಿದೆ. ಅದಾಗಿದೆ ಅತ್ಯಂತ ಶ್ರೇಷ್ಠವಾದ ಮಾರ್ಗ. ಅವರು ಬದಲಾವಣೆಯಾಗಿರುವುದು ಅಕೀದಃದ (ವಿಶ್ವಾಸದ) ಮೂಲಕವಾಗಿದೆ. ಇದುವೇ ಬದಲಾವಣೆಯ ಅಡಿಪಾಯ.

ಒಟ್ಟಾಗಿ ಹೇಳುವುದಾದರೆ, ಸತ್ಯತೆಯನ್ನು ನೆಲೆನಿಲ್ಲಿಸುವುದರಲ್ಲಿ ಹಾಗೂ ಮಿಥ್ಯತೆಯನ್ನು ನಿರ್ಮೂಲನೆ ಮಾಡುವಲ್ಲಿ ಉಲಮಾಗಳ ಪಾತ್ರವು ಮಹತ್ತರವಾದುದಾಗಿದೆ. ಅವರು ಸತ್ಯತೆಯನ್ನು ನೆಲೆನಿಲ್ಲಿಸುವರು ಹಾಗೂ ಮಿಥ್ಯೆಯನ್ನು ಮಿಥ್ಯತೆಯಾಗಿಯೇ ಜನರಿಗೆ ತಿಳಿಸಿಕೊಡುವರು. ಇದಾಗಿದೆ ಈ ಉಮ್ಮತಿನ ಗುಣವಿಶೇಷ. ಶೈಖುಲ್ ಇಸ್ಲಾಮ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رَحِمَهُ ٱللَّهُ) ರವರು ನಿರ್ವಹಿಸಿದ್ದು ಇದೇ ಕಾರ್ಯವಾಗಿತ್ತು ಎಂಬುದನ್ನು ನಾವವರ ಜೀವನ ಚರಿತ್ರೆಯಲ್ಲಿ ಕಾಣಬಹುದಾಗಿದೆ. ಅವರ ಜೀವನಚರಿತ್ರೆಯ ಕೆಲವು ಪ್ರಮುಖ ಭಾಗಗಳನ್ನು ನಾವು ಮುಂದಿನ ತರಗತಿಯಲ್ಲಿ ಕಲಿಯೋಣ. (إِن شَآءَ ٱللَّهُ)

ಅಲ್ಲಾಹು (سُبْحَانَهُ وَتَعَالَىٰ) ಉಲಮಾಗಳ ಮಾರ್ಗದರ್ಶನದಲ್ಲಿ ಮುಂದೆ ಸಾಗಲು ಹಾಗೂ ಅದರಮೇಲೆ ದೃಢವಾಗಿ ನೆಲೆನಿಲ್ಲಲು ನಮಗೂ ನಮ್ಮ ಕುಟುಂಬಕ್ಕೂ ತೌಫೀಕ್ ನೀಡಲಿ. ಅತ್ಯುತ್ತಮವಾಗಿ ಅರಿತವನು ಅಲ್ಲಾಹುವಾಗಿರುವನು. ಅಲ್ಲಾಹುವಿನ ಸಲಾತ್ ಮತ್ತು ಸಲಾಮ್‌ಗಳು ನಮ್ಮ ಪ್ರವಾದಿಯವರ ಮೇಲೆ, ಅವರ ಕುಟುಂಬದವರ ಮೇಲೆ ಹಾಗೂ ಅವರ ಸಹಚರರ ಮೇಲೆ ಸದಾ ಇರಲಿ.